**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 5349/2023**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿ ಃ ಸಂಗೀತಾ ಮತ್ತು ಇನ್ನೊಬ್ಬ.**

**ಆಪಾದನೆ**

ನಾನುಃ **ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ** ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ ಆದ ನಾನು ಆರೋಪಿಗಳಾದ

| | |
|---|---|
| ಆರೋಪಿ 1. | ನಿಂಗಪ್ಪ ತಂದೆ ಭೀಮಣ್ಣ ಕೊಲ್ಕರ, |
| 2. | ರಾಮಪ್ಪ @ ರಾಮಲಿಂಗಪ್ಪ ತಂದೆ ಸಂಜೀವ ಭೀಮಶೇಪ್ಪ, |
| 3. | ಶಿವಪ್ಪ ತಂದೆ ನಿಂಗಪ್ಪ |
| 4. | ಎಲ್ಲರೂ ಸಾಃ ಯರಗೋಳ ಗ್ರಾಮ,<br>ತಾಃ ಮತ್ತು ಜಿಃ ಯಾದಗಿರಿ. |

**ನಿಮ್ಮ ವಿರುದ್ಧ ದೋಷಿಸುವ ಆಪಾದನೆ ಏನೆಂದರೆ,**

ಮೊದಲನೆಯದಾಗಿ ದಿನಾಂಕಃ 09-10-2023 ರಂದು ಬೆಃ 11-00 ಗಂಟೆಗೆ ಯಾದಗಿರಿ (ಗ್ರಾ) ಪೋಲಿಸ್ ಠಾಣೆ ಸರಹದ್ದಿಲ್ಲಿ ಯರಗೋಳ ಗ್ರಾಮ ಪಂಚಯಿತಿ ಹತ್ತಿರ ಅಧ್ಯಕ್ಷರಿಗೆ ಮತ್ತು ಪಿ.ಡಿ.ಒ.ಗೆ ಉದ್ಯೋಗ ಖಾತ್ರಿ ಕೆಲಸ ಕೆಳಲು ಹೋದಾಗ ಈ ಆರೋಪಿತರಾದ ನೀವು ಸೇರಿ ಈ ಸೂಳೆ ಮಕ್ಕಳುದು ಊರಲ್ಲಿ ಬಹಳ ಆಗ್ಯಾದ ಈ ಸೂಳೆ ಮಕ್ಕಳಿಗೆ ಒಂದು ಗತಿ ಕಾಣಸಮ್ಮ ಅಂತಾ ಅವರಲ್ಲಿ 1 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಏ ಸೂಳೆರೆ ಈ ಊರಲ್ಲಿ ಯಾರು ಕೆಲಸ ಕೆಳಲ್ಲ ನಿಮ್ಮದೆ ಬಹಳ ಸೊಕ್ಕಾದ ಪಂಚಾಯಿತಿಯಲ್ಲಿ ಗಂಟ ಇಟ್ಟಿರೆನು ಯಾಕ ಮ್ಯಾಗ ಮ್ಯಾಗ ಬಂದ ನರೇಗಾ ಕೆಲಸ ಕೊಡ್ರಿ

ಅಂತ ಕೆಳತಿರಿ ನಾಲ್ಕ ಮಂದಿ ಸೇರಿಸಿಕೊಂಡು ಬಂದ ಬಿಡತಾಳ ದೊಡ್ಡ ಲೀಡರ್ ಆಗಿ ಬಿಟಿದೇನು ರಂಡಿ ಸೂಳಿ ಬಾ ಇವತ್ತ ಪಂಚಾಯಿತಿಯಲ್ಲಿ ಒಂದು ಗತಿ ಕಾಣಿಸಿ ಬಿಡತಿನಿ ನಿಮ್ಮವ್ವನ್ ನಿನಗ ಖಲಾಸ ಮಾಡಿದರ ಈ ಪಂಚಾಯಿತಿಯಲ್ಲಿ ಯಾರು ಏನು ಕೆಳೋರಿರಲ್ಲ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ನೀವು ಭಾ.ದಂ.ಸಂ. 504 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರಾದ ನೀವು 1 ನೇ ಆರೋಪಿಯಾದ ನೀನು ಈ ರಂಡಿ ನನಗೆ ತಿರುಗಿ ಮಾತಡತಿ ಬೊಸಡಿ ಅಂತ ಚಾಸಾಃ1 ರವರ ಸೀರೆ ಸೆರಗು ಹಿಡಿದುಕೊಂಡು ದರ, ದರನೆ ಕಂಪೌಂಡ ಕಡೆಗೆ ಎಳೆದುಕೊಂಡು ಹೋಗಿ ಅಲ್ಲೆ ಬಿದ್ದಿದ್ದ ಕಟ್ಟಿಗೆಯಿಂದ ಬೆನ್ನಿಗೆ ಮತ್ತು ಸೊಂಟಕ್ಕೆ ಹೊಡೆದು ಗುಪ್ತ ಪೆಟ್ಟು ಮಾಡಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 324 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರಾದ ನೀನು 2 ನೇ ಆರೋಪಿಯಾದ ನೀನು ಚಾಸಾಃ 1 ರವರಿಗೆ ಸಾಯಿ ರಂಡಿ ನಾನು ಅಧ್ಯಕ್ಷನಾದ ಮೇಲೆ ಈ ರಿತಿ ಕೆಲಸ ಕೆಳಕೊಂಡು ಬರತಿರೇನು ಮೊದಲ ಯಾರು ಕೆಳತಿರಲಿಲ್ಲ ಅಂತಾ ಕೈ ಮುಷ್ಠಿ ಮಾಡಿ ಚಾಸಾಃ 1 ನೇದ್ದವಳ ಎದೆಗೆ ಮತ್ತು ಬೆನ್ನಿಗೆ ಗುದ್ದಿ ಗುಪ್ತ ಪೆಟ್ಟು ಮಾಡಿದ್ದು, ಆರೋಪಿತರಾದ ನೀವು ಚಾಸಾಃ1 ರವರಿಗೆ ನೆಲಕ್ಕೆ ಹಾಕಿ ಒದೆಯುತ್ತಿರುವಾಗ ಚಾಸಾಃ4 ರವರು ಬಿಡಿಸಲು ಹೋದಾಗ ಆಕೆಗೆ ದಬ್ಬಿಸಿಕೊಟ್ಟು ಚಾಸಾಃ 1 ರವರಿಗೆ ರಂಡಿದು ಊರೊಳಗಡೆ ಬಹಳ ಆಗ್ಯಾದ ಈಕೆಗೆ ಟೊಂಕ ಮುರಿಯಂಗ ಹೊಡದರ ನಮ್ಮ ತಂಟೆಗೆ ಯಾರು ಬರೊಲ್ಲ ಅಂತಾ 1 ನೇ ಆರೋಪಿಯಾದ ನೀನು ನೆಲಕ್ಕೆ ಹಾಕಿ ಕೈ ಮುಷ್ಠಿ ಮಾಡಿ ಹೊಟ್ಟೆಗೆ ಮತ್ತು ಎದೆ ಗುದ್ದಿ ಗುಪ್ತಪೆಟ್ಟು ಮಾಡಿ ಹಾಗೂ ಮನ ಬಂದಂತೆ ಕಾಲಿನಿಂದ

ಒದಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 323 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರಾದ ನೀವು ಚಾಸಾಃ1 ರವರಿಗೆ ಒಂದು ಹೆಣ್ಣು ಅನ್ನೊದು ನೋಡದೆ ಅಲ್ಲಿ ಬಹಳ ಜನರಿದ್ದರು ಆಕೆ ಎದೆಯ ಮೇಲಿನ ಸೀರೆ ಸೇರಗು ಮತ್ತು ತಲೆ ಕೂದಲು ಹಿಡಿದು ಎಳದಾಡಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 506 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

5. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರಾದ ನೀವು 3 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಏಲೆ ರಂಡಿ ನಮ್ಮ ಅಧ್ಯಕ್ಷರ ಅವದಿಯಲ್ಲಿ ಬಂದು ಕೆಲಸ ಕೆಳತಿರಿ ಸೂಳೆ ಮಕ್ಕಳೆ ನಿಮಗ ಸಾಯಿಸಿದರು ಯಾರು ಕೇಳೊರಿಲ್ಲ ಅಂತಾ ಜೀವ ಬೆದರಿಕೆ ಹಾಕಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 506 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 11-06-2025**
**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**
**ನ್ಯಾಯಾಧೀಶರು ಯಾದಗಿರಿ.**